DOCUMENT No:-30

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ : ಬೆಂಅಪ್ರಾ/ನಯೋಸ/ CLU-245/ 4250 /2014-15. ದಿನಾಂಕ : 12-02-15
No. Date :

## ಪ್ರಾರಂಭಿಕ ಪ್ರಮಾಣ ಪತ್ರ

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡತೋಗೂರು ಗ್ರಾಮದ ಸರ್ವೆ ನಂ. 103/1 ರಲ್ಲಿ 04 ಎಕರೆ 07 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉದ್ದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ [3] ರಂತೆ ಭೂ-ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಪಿ. ಶ್ರೀಧರ್ ರೆಡ್ಡಿ ರವರು ಕೋರಿರುವ ಬಗ್ಗೆ.

ಉಲ್ಲೇಖ:
1. ದಿನಾಂಕ 30.12.2013 ರ ಅರ್ಜಿದಾರರ ಮನವಿ.
2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ Sub section [3] ರಂತೆ ಕ್ರಮ ವಹಿಸಿರುವುದು.
3. ಮಾನ್ಯ ಆಯುಕ್ತರವರ ಆದೇಶ ದಿನಾಂಕ 29.01.2015.
4. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/CLU-245/4122/2014-15, ದಿನಾಂಕ 04.02.2015 ರಲ್ಲಿ ಭೂ ಉಪಯೋಗ ಬದಲಾವಣೆ ಸಂಬಂದ ಅರ್ಜಿದಾರರಿಗೆ ₹. 07,64,000/- ಗಳನ್ನು ಪಾವತಿಸಲು ತಿಳಿಸಿರುವುದು.
5. ಅರ್ಜಿದಾರರು ದಿನಾಂಕ 05.02.2015 ರಂದು ಕೆನರಾ ಬ್ಯಾಂಕ್ ನ ಚಲನ್ ನಂ. 37726 ರ ಮೂಲಕ ₹. 07,64,000/- ಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 07.02.2015 ರಂದು ಹಣ ಸಂದಾಯವಾದ ಬಗ್ಗೆ ದೃಢೀಕರಿಸಿರುವುದು.

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡತೋಗೂರು ಗ್ರಾಮದ ಸರ್ವೆ ನಂ. 103/1 ರಲ್ಲಿ 04 ಎಕರೆ 07 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆಯನ್ನು ಉಲ್ಲೇಖ [1] ರ ಅರ್ಜಿಯಲ್ಲಿ ಕೋರಲಾಗಿರುತ್ತದೆ. ಈ ಸಂಬಂಧ ಉಲ್ಲೇಖ [2] ರಲ್ಲಿ ಅವಕಾಶ ಕಲ್ಪಿಸಿರುವಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14[ಎ] Subsection [3] ರ [Deemed Permission] ಅಡಿಯಲ್ಲಿ ಸದರಿ ಜಮೀನನ್ನು ಕೈಗಾರಿಕೆ [ಹೈಟೆಕ್] ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಮಾನ್ಯ ಆಯುಕ್ತರು ಉಲ್ಲೇಖ [3] ರಲ್ಲಿ ಅನುಮೋದನೆ ನೀಡಿರುತ್ತಾರೆ. ಅದರಂತೆ ಸದರಿ ಜಮೀನಿನ ಭೂ ಉಪಯೋಗ ಬದಲಾವಣೆ ಕುರಿತಂತೆ ಒಟ್ಟು ಮೊತ್ತ ₹. 07,64,000/- [₹. ಏಳು ಲಕ್ಷದ ಅರವತ್ತನಾಲ್ಕು ಸಾವಿರ ಮಾತ್ರ] ಗಳನ್ನು ಸಂದಾಯ ಮಾಡುವಂತೆ ಉಲ್ಲೇಖ [4] ಪತ್ರದಲ್ಲಿ ತಿಳಿಸಲಾಗಿತ್ತು. ಅದರಂತೆ ₹. 07,64,000/- [₹. ಏಳು ಲಕ್ಷದ ಅರವತ್ತನಾಲ್ಕು ಸಾವಿರ ಮಾತ್ರ] ಗಳನ್ನು ಚಲನ್ ಸಂಖ್ಯೆ 37726 ರಲ್ಲಿ ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಸದರಿ ಶುಲ್ಕಗಳು ಪ್ರಾಧಿಕಾರಕ್ಕೆ ಸಂದಾಯವಾಗಿರುವ ಕುರಿತಂತೆ ಪ್ರಾಧಿಕಾರದ ಆರ್ಥಿಕ ವಿಭಾಗದವರು ದೃಢೀಕರಿಸಿರುತ್ತಾರೆ.